ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue 2, March-April, 2024, Pp. 67-72.
©*IIMRD*, Mysuru
IIMRD JOURNALS
www.iimrd.com

# ಸರ್ವಜ್ಞನ ವಚನಗಳಲ್ಲಿ ಸರ್ವಕಾಲಿಕ ಸತ್ಯಗಳು

**ರವೀಂದ್ರ ಕೆ.ವಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಮಾನವನು ನಾಗರಿಕನಾದಂತೆ ಆದರ್ಶಗಳನ್ನು ರೂಪಿಸಿಕೊಂಡು ತನ್ನ ಜೀವನದಲ್ಲಿ ರೂಢಿಸಿಕೊಂಡನು. ಮಾನವನು ರೂಪಿಸಿಕೊಂಡ ಆದರ್ಶಗಳು ಮುಂದೆ ಉತ್ತಮ ಮೌಲ್ಯಗಳಾಗಿ ಸರ್ವಕಾಲಿಕ ಸತ್ಯಗಳಾಗಿ ಪರಿವರ್ತನೆಯಾಗಿದ್ದು ಸೌರ್ಹದತೆಯ ಜೀವನವನ್ನು ಸಾಗಿಸಲು ಸಹಾಯಕವಾಗಿವೆ. ಇಂತಹ ಜೀವನಾದರ್ಶದ ಮೌಲ್ಯಗಳನ್ನು 12ನೇ ಶತಮಾನದ ವಚನ ಸಾಹಿತ್ಯ ಕಾಲಘಟ್ಟವೂದಾಖಲಿಸಿರುವುದು ಪ್ರಶಂಸನೀಯ ವಿಷಯವಾಗಿದೆ. 12ನೇ ಶತಮಾನದ ವಚನಕಾರರಾದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸೂಳೇ ಸಂಕವ್ವ, ಜೇಡರ ದಾಸಿಮಯ್ಯ, ಸರ್ವಜ್ಞ, ಇನ್ನು ಮುಂತಾದವರು ಸಮಸಮಾಜದ ಪರಿಕಲ್ಪನೆಯನ್ನು ಹೊಂದಿದ್ದು ಮಾನವನು ಉತ್ತಮ ಜೀವನ ಸಾಗಿಸಲು ಅನುಸರಿಸಬೇಕಾದ ಹಲವಾರು ಅಂಶಗಳನ್ನು ಚರ್ಚಿಸಿದ್ದು ಸರ್ವಕಾಲಿಕ ಸತ್ಯಗಳಾಗಿವೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ವಚನಕಾರರು, ಸರ್ವಜ್ಞನ ವಚನಗಳು.

**ಪೀಠಿಕೆ**

ಸರ್ವಜ್ಞ ಬಹುಮುಖ ಪ್ರತಿಭೆಯುಳ್ಳ ಕವಿಯಾಗಿದ್ದು, ಇವನು ಹೇಳದೆ ಇರುವ ವಿಚಾರವಿಲ್ಲ. ಸರ್ವಜ್ಞ ತನ್ನ ವಚನದಲ್ಲಿ ಹೇಳಿರುವ ಅಂಶಗಳ ಪಟ್ಟಿಯನ್ನು ಗಮನಿಸುತ್ತಾ ಹೋದರೆ ನೂರಾರು ವಿಷಯಗಳಿದ್ದು ಸರ್ವಕಾಲಕ್ಕೂ ಸತ್ಯತೆಯಿಂದ ಕೂಡಿದ್ದು ಪ್ರಸ್ತುತವಾಗಿವೆ. ಸರ್ವಜ್ಞ ತನ್ನ ವಚನಗಳಲ್ಲಿ ಸಮಾಜ, ಕುಟುಂಬ, ಪ್ರಭುತ್ವ, ಕೃಷಿ, ಗುರು ಶಿಷ್ಯರ ಸಂಬಂಧ, ವೈದ್ಯ, ಆಹಾರ ಪದ್ಧತಿ, ಅನ್ನ, ವಿಧಿ ಬರಹ, ಮನೋದೈರ್ಯ, ದಾನ, ಅನುಭಾವ, ಜನಪದೀಯ ಅಂಶಗಳು, ನೀತಿ, ಬೇಸಾಯ, ವೈಚಾರಿಕತೆ, ಗಾದೆ, ವಿದ್ಯೆ, ಜಾತಿ, ಬಡತನ, ಆರೋಗ್ಯ, ಸಮಾನತೆ, ಪ್ರಾಣಿ–ಪಕ್ಷಿ, ಇನ್ನು ಹಲವಾರು ವಿಷಯಗಳನ್ನು ಹೇಳಿದ್ದು ಸರ್ವಕಾಲಿಕ ಸತ್ಯಗಳಾಗಿವೆ.

"ಕವಿ ಸರ್ವಜ್ಞ ಹಲವು ವಿಷಯಗಳ ತಜ್ಞ ಎಂಬುದರಲ್ಲಿ ಸಂದೇಹವಿರಲಾರದು ಜೀವನ ವ್ಯಾಪಾರದ ಬಗ್ಗೆ ಸ್ಪಷ್ಟ ಕಲ್ಪನೆ ಇರುವಂತವನು. ಅವನ ತ್ರಿಪದಿಗಳು ವ್ಯವಹಾರ ಜ್ಞಾನವನ್ನು, ಅದರಿಂದ ಬರುವ 'ಜಾಣ' ಸೂಕ್ಷ್ಮತೆಯನ್ನು ಕಲ್ಪಿಸುವುವು. ಜನರ ನಡುವೆ ಹಾದು ಹೋಗುವ ಮತ್ತು ಅವರ ಹಾಗೂ ಹೋಗುಗಳಿಗೆ

*Please cite this article as:* *ರವೀಂದ್ರ ಕೆ.ವಿ.* (2024). ಸರ್ವಜ್ಞನ ವಚನಗಳಲ್ಲಿ ಸರ್ವಕಾಲಿಕ ಸತ್ಯಗಳು '. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, ಸಂಪುಟ–5, ವಿಶೇಷ ಸಂಚಿಕೆ–2. ಪು.ಸಂ. 67–72.*

ಕಾರಣವಾಗುವ ವಿಚಾರಗಳನ್ನು ಅನುಭವವನ್ನು ವಚನಗಳಲ್ಲಿ ಸೂಕ್ತವಾಗಿ ಮತ್ತು ಸೂತ್ರಪ್ರಾಯವಾಗಿ ಹಿಡಿದಿಡುವ ಪ್ರಯತ್ನ ಕವಿಯದು. ಧರ್ಮ, ನೀತಿ, ಸ್ತ್ರೀ, ಜ್ಯೋತಿಷ್ಯ, ಶಕುನ, ಮೊದಲಾದ ವಿಷಯಗಳಲ್ಲಿ ಅವನು ತಳೆಯುವ ನಿಲುವನ್ನು ನೋಡಿದರೆ ಸಂಪ್ರದಾಯವಾದಿಯಂತೆ ತೋರುವನು. ಖಂಡಿತವಾದಿಯಾದರೂ ಸರ್ವಜ್ಞ ವ್ಯವಸ್ಥೆಯ ಕಡು ವಿರೋಧಿಯಲ್ಲ. ಒಂದು ರೀತಿಯಲ್ಲಿ ಯಾವುದು ಸರಿ ಯಾವುದು ಸರಿಯಲ್ಲ ಎಂಬುವುದರ ನೋಟವೇ ಅವನಗೆ ಮುಖ್ಯ. ಅದು ಅವನ ನಂಬಿಕೆಗೆ ಒಳಪಟ್ಟು ಸಾಗುವಂತದು. ವಿಚಾರ ಜಾಗೃತಿಯನ್ನೂ ಅವನ ತ್ರಿಪದಿಗಳು ಉಂಟು ಮಾಡುತ್ತವೆ. ಆದರೆ ಆ ಕುರಿತು ತೆಗೆದುಕೊಳ್ಳುವ ಧೋರಣೆಯಲ್ಲಿ ಅವನು ಕ್ರಾಂತಿಕಾರಿಯಂತೆ ಕಾಣುವುದಿಲ್ಲ. ತ್ರಿಪದಿ ರಚನೆಯ ಅನನ್ಯತೆ ಮತ್ತು ಅದಕ್ಕೆ ಬಳಸುವ ಭಾಷೆಯಲ್ಲಿ ಅವನು ನಿಸ್ಸಂದೇಹವಾಗಿ ಕ್ರಾಂತಿಕಾರಿ. ಸರ್ವಜ್ಞ ಯಾವ ಹೊಸ ತತ್ವವನ್ನು ಮಂಡಿಸಿಲ್ಲ ನಿಜ ಆದರೆ ಜೀವನವನ್ನೇ ತೆರೆದಿಟ್ಟಿದ್ದಾನೆ."[1]

ಭಾರತೀಯ ಪರಂಪರೆಯಲ್ಲಿ ದಾನಕ್ಕೆ ಮಹತ್ವದ ಸ್ಥಾನವಿದ್ದು ಅನಾದಿ ಕಾಲದಿಂದಲೂ ಮಾನವನು ಯಾವುದೇ ಪಲಾಪೇಕ್ಷಗಳನ್ನು ಅಪೇಕ್ಷಿಸದೆ ದಾನವನ್ನು ಮಾಡುತ್ತಾ ಬರುತ್ತಿದ್ದಾನೆ. ಇಂತಹ ದಾನದ ಮಹತ್ವವನ್ನು ಕುರಿತು ಸರ್ವಜ್ಞನು ವಚನವೊಂದರಲ್ಲಿ ಪ್ರಸ್ತಾಪಿಸಿದ್ದಾರೆ.

***"ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು***
***ಪರಿಣಾಮ ವಕ್ಕು ಕೈಲಾಸ***
***ನೆರಮನೆಯು ಅಕ್ಕು ಸರ್ವಜ್ಞ"***

ಮಾನವನಿಗೆ ದಿನ ನಿತ್ಯ ಜೀವನದ ಅವಶ್ಯಕತೆಗೆ ಮೀರಿ ಸಿರಿತನ ಬಂದಂತಹ ಸಂದರ್ಭದಲ್ಲಿ ಬಡವನನ್ನು ಕರೆದು ದಾನವ ಮಾಡಿದರೆ ಕೈಲಾಸ ಪ್ರಾಪ್ತಿಯಾಗುತ್ತದೆ. ಸಿರಿಯ ಅವಶ್ಯಕತೆ ಇರುವನಿಗೆ ಅಂದರೆ ಬಡವನಿಗೆ ದಾನವನ್ನು ಮಾಡಿದರೆ ಮಾತ್ರ ದಾನಕ್ಕೆ ನಿಜವಾದ ಬೆಲೆ ಇರುತ್ತದೆ. ಅದರೆ ಪ್ರಸ್ತುತ ಯಂತ್ರನಾಗರಿಕತೆಯ ಸಂಧರ್ಭದಲ್ಲಿ ಮಾನವನು ದುರಾಸೆಯಿಂದ ತನ್ನ ಅವಶ್ಯಕತೆಗೆ ಮೀರಿ ಗಳಿಸುವುದಲ್ಲದೆ ಸಂಪಾದಿಸಿದ್ದನ್ನು ದಾನವ ಮಾಡದೆ ಬಚ್ಚಿಡಿತಿದ್ದಾನೆ. ತಾನು ಗಳಿಸಿದ ಸಿರಿಯನ್ನು ತಾನು ಅನುಭವಿಸದೇ ಪರಾರ ಪಾಲು ಮಾಡುತ್ತಿದ್ದಾನೆ. ಇದರಿಂದ ಯಾವದೇ ಪ್ರಯೋಜನವಿಲ್ಲ. ಇದರ ಬದಲಿಗೆ ತಾನು ಗಳಿಸಿದ ಹೆಚ್ಚುವರಿ ಸಿರಿಯನ್ನು ಬಡವನಿಗೆ ದಾನವ ಮಾಡಿದರೆತನಗೆ ಕೈಲಾಸ ಪ್ರಾಪ್ತಿಯಾಗುತ್ತದೆಂದು ಹೇಳಿದ್ದು ಇತ್ತಿಚಿನ ದಿನದಲ್ಲೂ ಪ್ರಸ್ತುತವಾಗಿದ್ದು ಸರ್ವಕಾಲಿಕ ಸತ್ಯವಾಗಿದೆ.

ಸರ್ವಜ್ಞನು ತನ್ನ ವಚನಗಳ ಮೂಲಕ ಅನ್ನವನ್ನು ದೈವೀಕರಿಸಿದ್ದಾರೆ. ಅನ್ನ ದೇವರ ಮುಂದೆ ಇನ್ನೊಂದು ದೇವರು ಇದ್ದಾನೆಯೇ? ಎಂದು ಕೇಳುವ ಪ್ರಶ್ನೆ ಸರ್ವಕಾಲಕ್ಕೂ ಸತ್ಯವಾಗಿದೆ. ಹಸಿವನ್ನು ನೀಗಿಸುವಂತಹ ಆಹಾರ ಪಧಾರ್ಥಗಳನ್ನು ಬೆಳೆಯುವ ರೈತನನ್ನು ದೇವರಾಗಿಸಿದ್ದಾನೆ.

***"ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ?***
***ಅನ್ನಂಟಾದರುಂಲುಂಟು ಜಗದೊಳಗೆ***
***ಅನ್ನವೇ ದೈವ ಸರ್ವಜ್ಞ"***

ಎಂದು ಹೇಳುವ ಸರ್ವಜ್ಞ ಅನ್ನದ ಋಣ ಇರುವ ತನಕ ಮಾನವನು ಭೂಮಿಯ ಮೇಲೆ ಜೀವಸುತ್ತಾನೆ, ಅನ್ನದ ಋಣ ತೀರದ ಕೂಡಲೇ ಮಾನವನ ಜೀವವು ಕೊನೆಗೊಳ್ಳುತ್ತದೆ. ಅದ್ದರಿಂದ ಹಸಿವು

ಎಂದು ಬರುವವರಿಗೆ ಅನ್ನವನ್ನು ನೀಡುವ ಸಂಪ್ರಾದಯವನ್ನು ನಾವು ಅನುಸರಿಕೊಳ್ಳಬೇಕಾಗಿದೆ. ಅನ್ನವನ್ನು ಪೋಲು ಮಾಡದೆ ಮಿತವಾಗಿ ತಿಂದು ಉಳಿದ ಅನ್ನವನ್ನು ಹಸಿದವನಿಗೆ ನೀಡಿದರೆ ದೇಶದಲ್ಲಿನ ಪ್ರತಿಯೋದು ಪ್ರಜೆಯೂ ಹಸಿವಿನಿಂದ ನರಳುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಅಲ್ಲದೆ ದೇಶವನ್ನು ಹಸಿವು ಮುಕ್ತವಾಗಿ ಮಾಡಬಹುದೆಂಬ ಆಶಯವನ್ನು ಅಭಿವ್ಯಕ್ತಪಡಿಸಿದ್ದು ಸರ್ವಕಾಲಿಕ ಸತ್ಯವಾಗಿದೆ.

ಸರ್ವಜ್ಞನು 12ನೇ ಶತಮಾನದ ಸಮಾಜದಲ್ಲಿ ತಾಂಡವಾಡುತ್ತಿದ್ದ ಜಾತಿ ಪದ್ಧತಿಯ ವಿರುದ್ಧ ಹೋರಾಟವನ್ನು ಮಾಡಿದ್ದಾರೆ. ಪ್ರಸ್ತುತ ಸಂಧರ್ಭದಲ್ಲೂ ಈವೊಂದು ಜಾತಿ ಪದ್ಧತಿಯು ದೇಶದ ಅಭಿವೃದ್ಧಿ ಮತ್ತು ಮಾನವನ ಅಭಿವೃದ್ಧಿಗೂ ಮಾರಕವಾಗಿ ಪರಿಣಿಮಿಸಿದ್ದು ಜಾತಿಯಿಂದ ಮುಕ್ತವಾಗಲು ಮಾನವನು ಪ್ರಯತಿಸುತ್ತಿದ್ದಾನೆ. ಸಮಾಜದ ಪ್ರಗತಿಗೆ ಮಾರಕವಾಗಿರುವ ಜಾತಿಪದ್ಧತಿಯನ್ನು ತಿರಸ್ಕರಿಸಿದ ಸರ್ವಜ್ಞನು ತಮ್ಮ ವಚನಗಳ ಮೂಲಕ ಅಲ್ಲಗೆಳೆದಿದ್ದಾರೆ. ತಿರಸ್ಕರಿಸಿದ್ದಾರೆ.

*"ನಡೆವುದೊಂದೇ ಭೂಮಿ। ಕುಡಿವುದೊಂದೇ ನೀರು*
*ಸುಡುವಗ್ನಿಯೊಂದೇ ಇಂತಿರು ತಿರಲು ಕುಲಗೋತ್ರ*
*ನಡುವೆ ಎತ್ತಣದು ಸರ್ವಜ್ಞ"*

ಜಾತಿ ಪದ್ಧತಿಯನ್ನು ಬಿಡದೆ ಅನುಸರಿಸಿಕೊಂಡು ಬರುತ್ತಿರುವ ವೈದಿಕ ಪರಂಪರೆ ಹಾಗೂ ಪುರೋಹಿತಶಾಹಿಗಳ ದಬ್ಬಾಳಿಕೆಯನ್ನು ವಚಹನದಲ್ಲಿ ಪ್ರಶ್ನಿಸಿದ್ದಾರೆ. ಮಾನವರು ನಡೆಯುತ್ತಿರುವ ಭೂಮಿ, ಕುಡಿಯುತ್ತಿರುವ ನೀರು, ಆಹಾರವನ್ನು ಬೇಯಿಸಲು ಸುಡುತ್ತಿರುವ ಬೆಂಕಿ ಎಲ್ಲವೂ ಒಂದೇಯಾಗಿದ್ದು ಪ್ರಕೃತಿಯಿಂದ ಯಾವುದೇ ಭೇದಭಾವವಿಲ್ಲದೆ ಪಡೆಯುತ್ತಿದ್ದಾನೆ. ಆದರೆ ಮನುಷ್ಯ ಮನುಷ್ಯರ ನಡುವೆ ರೂಪಿಸಿಕೊಂಡಿರುವ ಕಂದಕಗಳಾದ ಕುಲ, ಗೋತ್ರ ಭಿನ್ನತೆಗಳು ಯಾಕೆಂದು ಸರ್ವಜ್ಞ ಅಲ್ಲಗೆಳೆದಿದ್ದಾನೆ. ಜಾತಿ ಎಂಬವುದು ಮನುಷ್ಯರ ನಡುವೆ ಗೋಡೆಗಳನ್ನು ಕಟ್ಟಿ ಸಮಾಜದ ಅಭಿವೃದ್ಧಿಗೆ ಮಾರಕವಾಗಿದೆ. ಸಮ ಸಮಾಜಕ್ಕೆ ಅಡ್ಡಿಯಾಗಿರುವಂತಹ ಜಾತಿಯನ್ನು ನಿರಾಕರಿಸಿ ಮೇಲು ಕೀಲೆಂಬ ಭಾವನೆಗಳನ್ನು ಅಳಿಸಿ ಹಾಕಿ ಎಲ್ಲರೂ ಸೌರ್ವಹದತೆಯಿಂದ ಬದುಕಬೇಂಬ ಅಶಯವಿಲ್ಲಿದ್ದು ಸರ್ವಕಾಲಿಕವಾಗಿದೆ.

ಭಾರತ ಸಂಸ್ಕೃತಿ ಆಧಾರಿತ ಸಮಾಜ ಮತ್ತು ಪುರುಷ ಪ್ರಧಾನ ಸಮಾಜವಾಗಿದ್ದು ಹೆಣ್ಣನ್ನು ಭೋಗ ವಸ್ತುವಾಗಿ ಮತ್ತು ದ್ವಿತೀಯ ದರ್ಜೆಯ ಪ್ರಜೆಯಾಗಿ ಪರಿಗಣಿಸಿಎಲ್ಲಾ ಕ್ಷೇತ್ರಗಳಲ್ಲಿ ಕಡೆಗಣಿಸಿದ್ದಾರೆ. ಆದರೆ ವಚನ ಸಾಹಿತ್ಯ ಕಾಲಘಟ್ಟದಲ್ಲಿ ಮಾತ್ರ ಹೆಣ್ಣಿಗೆ ಪುರುಷನಷ್ಟೇ ಸಮಾನ ಸ್ಥಾನಮಾನವನ್ನು ಕಲ್ಪಿಸಿಲಾಗಿದೆ. ಸರ್ವಜ್ಞನು ಸಹ ಹೆಣ್ಣಿಗೆ ವಿಶೇಷ ಸ್ಥಾನಮಾನ ಮತ್ತು ಗೌರವವನ್ನು ಕಲ್ಪಿಸಿಕೊಟ್ಟಿದ್ದಾರೆ. ಸ್ತ್ರೀ ತನ್ನ ಜೀವಿತಾವಧಿಯಲ್ಲಿ ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾ ಪುರುಷನ ಎಲ್ಲಾ ಕೆಲಸ ಕಾರ್ಯಗಳಿಗೆ ನೆರೆಯಾಗುತ್ತಾಳೆ. ಅಂತಹ ಹೆಣ್ಣಿಗೆ ಗೌರವವನ್ನು ನೀಡಬೇಕೇಂದು ಸರ್ವಜ್ಞನು ಹೇಳಿದ್ದಾರೆ.

*"ಹೆಣ್ಣಿನಿಂದಲೇ ಇಹವು। ಹೆಣ್ಣಿನಿಂದಲೇ ಪರವು*
*ಹೆಣ್ಣಿನಿಂದಲೇ ಸಕಲವು ಸಂಪದವು ಹೆಣ್ಣೊಲ್ಲ*
*ದಣ್ಣಗಳು ಯಾರು? ಸರ್ವಜ್ಞ"*

ಪುರುಷನ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ಹೆಣ್ಣು ಬೆರೆತು ಹೋಗಿದ್ದಾಳೆ. ಹೆಣ್ಣಿನಿಂದಲೇ ಸುಖ, ಹೆಣ್ಣಿನಿಂದಲೇ ಸಂಪತ್ತು, ಹೆಣ್ಣಿನಿಂದಲೇ ಸಕಲ ಸೌಕರ್ಯಗಳು ಮನೆಯಲ್ಲಿ ತುಂಬಿರುತ್ತವೆ. ಅದರೆ

ಪುರುಷನು ಹೆಣ್ಣಿಗೆ ಗೌರವ ಕೊಡದೆ ವಸ್ತುವಾಗಿ ನೋಡುತ್ತಿದ್ದಾನೆ ಮತ್ತು ಉಪಯೋಗಿಸಿಕೊಳ್ಳುತ್ತಿದ್ದಾನೆ. ಇಂತಹ ಅಮಾನವೀಯ ನಡೆ ತಪ್ಪು ಎಂದು ಹೇಳಿ ಪ್ರತಿಯೋಂದು ಕೆಲಸದ ಹಿಂದೆ ಹೆಣ್ಣಿನ ಸಹಕಾರವಿದೆಯೆಂದು ಹೆಳುವುದರ ಜೋತೆಗೆ ಹೆಣ್ಣನ್ನು ಪ್ರತಿಯೊಂದು ಕಾಲದಲ್ಲೂ ಗೌರವಿಸಬೇಕೆಂದು ಹೇಳಿದ್ದಾರೆ.

"ಭಾರತವು ಕೃಷಿ ಪ್ರಧಾನವಾದ ದೇಶ ರೈತನೇ ಭಾರತದ ಬೆನ್ನೆಲುಬು ಸರ್ವವಿಧಿತ ವ್ಯಾಖ್ಯಾನ ಅಭಿಪ್ರಾಯ, ಕೃಷಿಯನ್ನು ಕುರಿತಂತೆ ಸರ್ವಜ್ಞನ ವಚನಗಳು ಕನ್ನಡ ಭಾಷೆಯಲ್ಲಿ ರಚನೆಗೊಂಡಿರುವ ಉಪಲಬ್ಧ ಕಾವ್ಯ ಪುರಾಣ ಶಾಸ್ತ್ರಗಳಿಗಿಂತ ಪ್ರಸ್ತುತವಾದವುಗಳು. ಸರ್ವಜ್ಞ ಕವಿ ಮೊಟ್ಟಮೊದಲು ಕೃಷಿಯ ಪ್ರಾಮುಖ್ಯತೆಯನ್ನು ಕಾವ್ಯ ಮಾಧ್ಯಮದಲ್ಲಿ ಸಂವಹನಗೊಳಿಸಿರುವ ಕೃಷಿ ವಿಜ್ಞಾನಿಯಾಗಿದ್ದಾನೆ.

***ಕೋಟಿ ವಿದ್ಯೆಗಳಿಂದ। ಮೇಟಿ ವಿದ್ಯೆವೇ ಮೇಲು।***
***ಮೇಟಿಯಂರಾಟಿ ನಡೆದುದ್ದಲ್ಲದೆ, ದೇಶ***
***ದಾಟವೆ ಕೆಡಹು ಸರ್ವಜ್ಞ॥***

ಬೇಸಾಯವನ್ನು ಮೇಟಿ ವಿದ್ಯೆಗೆ ಸಮೀಕರಿಸಿ ಕೃಷಿಯಿಂದ ಹತ್ತಿಯನ್ನು ಬೆಳೆದು ನೇಕಾರಿಕೆಯನ್ನು ನಡೆಸಲು ಬೆಂಗಳ ನೀಡದಿದ್ದರೆ ದೇಶದ ಬದುಕು ಕೆಡುತ್ತದೆ ಎಂಬುದನ್ನು ಲೋಕಕ್ಕೆ ಪದ್ಯಗಂಧಿ ವಚನದ ಮೂಲಕ ತಿಳಿಸಿದ್ದಾನೆ. ಬೇಸಾಯ ಪದ್ಧತಿಯಲ್ಲಿ ತಲೆದೂರುವ ಸಮಸ್ಯೆಗಳನ್ನು ಹೇಳಿರುವುದಲ್ಲದೆ ಬೇಸಾಯವನ್ನು ಬದುಕಿನ ಬೆನ್ನೆಲುಬು ಎಂದು ಜೀವನ ಮಾದರಿಗಳ ಮೂಲಕ ತಿಳಿಸಿದ್ದಾನೆ. ಬೇಸಾಯವು ಜೀವನ ಶೈಲಿಯ ವೃತ್ತಿ ಎಂದು ಸರ್ವಜ್ಞ ಸರಳವಾಗಿ ತಿಳಿಸಿದ್ದಾನೆ."[2] ಅಂದರೆ ಕೃಷಿ ಸರ್ವಕಾಲದಲ್ಲೂ ನಡೆಯುವ ಕ್ರೀಯೆಯಾಗಿದ್ದು ಕೃಷಿಕರನ್ನು ಗೌರವಿಸುವುದರ ಜೋತೆಗೆ ಕೃಷಿಸಿಗೆ ಸಂಬಧಿಸಿದ ಸಮಸ್ಯಗಳಿಗೆ ಪ್ರತಿಯೋಬ್ಬರೂ ಸಹಕರಿಸಬೇಕಾಗಿದೆ'

ನಮ್ಮ ಸಂಸ್ಕೃತಿಯಲ್ಲಿ ಗುರುಪರಂಪರೆಗೆ ಮಹತ್ವದ ಸ್ಥಾನವಿದೆ. ತಲೆಮಾರಿನಿಂದ ತಲೆಮಾರಿಗೆ ಗುರು ಪರಂಪರೆ ಹರಿದು ಬಂದಿದ್ದು ಗುರುವನ್ನು ಕೀರ್ತಿಸಿ ಕೊಂಡಾಡಿರುವುದನ್ನು ಕಾಣಬಹುದು. ಗುರು ಶಿಷ್ಯ ಪರಂಪರೆಯಲ್ಲಿ ಗುರು ತನ್ನ ಶಿಷ್ಯನ ಬಗ್ಗೆ ಹೊಂದಿರಬೇಕಾದ ಅನುಕಂಪ, ಕಾಳಜಿಯನ್ನು ಮತ್ತು ಶಿಷ್ಯನಾದವನು ತನ್ನ ಗುರುವಿನ ಬಗ್ಗೆ ಹೊಂದಿರಬೇಕಾದ ಪ್ರೀತಿ, ಗೌರವಗಳ ಜೋತೆಗೆ ಗುರುವಿನ ಮಹಿಮೆಯನ್ನು ಅಲ್ಲಗೆಳೆಯುವ ಹಾಗೂ ಗುರುವಿನ ಮಹಿಮೆಯನ್ನು ತಿಳಿಯದವರನ್ನು ಕುರಿತು ಹಲವಾರು ವಚನಗಳನ್ನು ರಚನೆ ಮಾಡಿದ್ದಾರೆ.ಸರ್ವಜ್ಞನು ಗುರುವಿನ ಪ್ರಾಮುಖ್ಯತೆಯನ್ನು ಕುರಿತು ರಚಿಸಿರುವ ವಚನವನ್ನು ಗಮನಿಸುವುದಾದರೆ,

***"ಗುರುಪಾದ ಸೇವೆ ತಾ ದೊರೆಕೊಂಡಿತಾದರೆ***
***ಪಿರಿದಪ್ಪ ಪಾಪ ಹರೆವುದು ಕರ್ಪುರದ***
***ಗಿರಿಯ ಸುಟ್ಟಂತೆ ಸರ್ವಜ್ಞ"***

ಗುರುವಿಲ್ಲದ ವಿದ್ಯೆ ಕುರುಡು ವಿದ್ಯೆಯಾಗಿದ್ದು ಅದು ನಮಗೆ ಮುಕ್ತಿಯನ್ನು ಮತ್ತು ಬಿಡುಗಡೆಯನ್ನು ಎಂದಿಗೂ ನೀಡಲಾರದು. ಆದರೆ ಗುರುವಿನ ಉಪದೇಶವನ್ನು, ಗುರುವಿನ ಕಾರುಣ್ಯವನ್ನು ಪಡೆದ ಶಿಷ್ಯನೂ

ಎಂದಿಗೂ ನರಕಕ್ಕೆ ಹೋಗುವುದಿಲ್ಲ. ಗುರುಪಾದ ಸೇವೆಯನ್ನು ಮಾಡುವ ಶಿಷ್ಯನ ಪಾಪಗಳೆಲ್ಲವೂ ಕರ್ಪೂರದಂತೆ ಸುಟ್ಟು ಹೋಗುತ್ತವೆ. ಆದ್ದರಿಂದ ಶಿಷ್ಯನಾದವನು ಗುರುವನ್ನು ದೈವವೆಂದು ಪರಿಗಣಿಸಿ ಸದಾ ಕಾಲ ಪೂಜಿಸಬೇಕೆಂದು ಹೇಳಿದಾರೆ.ಅಗೆಯೇ ಗುರುವಾದವನು ಶಿಷ್ಯನಿಗೆ ಒಳ್ಳೆಯ ಜ್ಞಾನ ಮತ್ತುಒಳ್ಳೆಯ ಮಾರ್ಗವನ್ನು ತೋರಿಸಿ ಉತ್ತಮ ದಾರಿಯಲ್ಲಿ ನಡೆಸುವ ಜವಾಬ್ಧಾರಿನ್ನು ವಹಿಸಬೇಕಾಗಿದೆಂದು ಹೇಳಿದ್ದು ಸರ್ವಕಾಲಿಕ ಸತ್ಯವಾಗಿದೆ.

ರಾಜಕೀಯ ವಿಡಂಬನೆಯೂ ಸರ್ವಜ್ಞನ ವಚನಗಳಲ್ಲಿ ಅಭಿವ್ಯಕ್ತಗೊಂಡಿದೆ. ಒಂದು ರಾಜ್ಯದ ಪ್ರಜೆಗಳು ಕ್ಷೇಮವಾಗಿ ನೆಮ್ಮದಿಯಿಂದ ಸಮೃದ್ಧವಾಗಿ ಜೀವನ ಸಾಗಿಸಲು ಆ ರಾಜ್ಯದ ನಾಯಕನ ಆಡಳಿತವನ್ನು ಅವಲಂಬಿಸಿರುತ್ತದೆಂದು ವಚನದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ.

***"ಹಿರಿತನವು ಹೇಡಿಂಗೆ, ಗುರುತನವು ಮೂಡಂಗೆ***
***ದೊರೆತನವು ನಾಡ ನೀಚಂಗೆ ದೊರೆತಿಹರೆ***
***ದರೆಯಲ್ಲ ಕೆಡುಗು ಸರ್ವಜ್ಞ"***

ಮೇಲಿನ ವಚನದಲ್ಲಿ ಹೇಡಿಯಾದವನಿಗೆ ಹಿರಿತನವನ್ನು, ಮೂಢನಾದವನಿಗೆ ಗುರುವಿನ ಸ್ಥಾನವನ್ನು, ನೀಚನಾಗಿರುವ ಮತ್ತು ಮಾನವೀಯ ಮೌಲ್ಯಗಳನ್ನು ಅರಿಯದಂತಹ ವ್ಯಕ್ತಿಗೆ ರಾಜನ ಸ್ಥಾನವನ್ನು ಕೊಟ್ಟರೆ ಇಡೀ ಸಮಾಜವೇ ವಿನಾಶದತ್ತ ತಲುಪುತ್ತದೆ.ಆದ್ದರಿಂದ ಉತ್ತಮ ಗುಣಗಳುಳ್ಳ ನಾಯಕನಿಗೆ ರಾಜನ ಪಟ್ಟವನ್ನು ಕಟ್ಟಿದಾಗ ಮಾತ್ರ ಪ್ರಜೆಗಳು ನೆಮ್ಮದಿಯಿಂದ ಜೀವನ ಸಾಗಿಸಲು ಸಾಧ್ಯವಾಗುತ್ತದೆಂದು ಸರ್ವಜ್ಞ ಹೇಳಿದ್ದಾರೆ. ಈ ವಚನ ಪ್ರಜಾಪ್ರಭುತ್ವದ ಪ್ರಸ್ತುತ ರಾಜಕೀಯ ಸಂದರ್ಭದಕ್ಕೂ ಅನ್ವಯವಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ಸರಿಯಾದ ನಾಯಕನನ್ನು ಅಯ್ಕೆ ಮಾಡಿದಿದ್ದರೆ ಪ್ರಜೆಗಳು ನೆಮ್ಮದಿಯಿಂದ ಬದುಕಲು ಕಷ್ಠವಾಗುತ್ತದೆ. ಅದ್ದರಿಂದ ಉತ್ತಮ ನಾಯಕನ ಅಯ್ಕೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದ್ದು ಸರ್ವಕಾಲಕ್ಕೂ ಪ್ರಸ್ತುತವಾಗಿದೆ.

ಮಾನವನ ಜನ್ಮ ಸಾರ್ಥಕತೆಯನ್ನು ಪಡೆಯುವುದೇ ಒಂದು ಹಿರಿಮೆಯೆಂದು ಸರ್ವಜ್ಞನೂ ತಮ್ಮ ವಚನಗಳಲ್ಲಿ ಚರ್ಚಿಸಿದ್ದಾರೆ. ಇಂತಹ ಸಾರ್ಥಕತೆಯನ್ನು ಪಡೆಯಲು ಒಳ್ಳೆಯ ಸಾಮಾಜಿಕ ಮೌಲ್ಯಗಳನ್ನು ಅನುಸರಿಸಿಕೊಂಡು ಯಾರಿಗೂ ತೊಂದರೆಯನ್ನು ಕೊಡದೆ ಸತ್ಯ ಮತ್ತು ನೀತಿಗಳಿಂದ ಉತ್ತಮ ಸಾಧನೆಯ ಮಾರ್ಗದಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮುನ್ನಡೆಯಬೇಕೆಂದು ರೂಪಕವಾಗಿ ಹೇಳಿದ್ದಾರೆ.

***"ಬತ್ತಿ ಎಣ್ಣೆಗಳೆರಡು ಹೊತ್ತಿ ಬೆಳಗುವ ತೆರದಿ***
***ಸತ್ಯ ನೀತಿಗಳು ಬೆಳಗಿಹವು ಜೋಡಗಲೆ***
***ಕತ್ತಲೀ ಜಗವು ಸರ್ವಜ್ಞ॥"***

ಬತ್ತಿ ಮತ್ತು ಎಣ್ಣೆ ಎರಡು ಸೇರಿ ಉರಿದು ಜಗಕ್ಕೆ ಬೆಳಕು ನೀಡುವ ಹಾಗೆ ಮಾನವನು ಸತ್ಯ ಮತ್ತು ನೀತಿಗಳಿಂದ ಸಮಾಜದ ವಿಕಾಸ ಮತ್ತು ಅಭಿವೃದ್ಧಿಗೆ ಕಾರಣಿಭೂತರಾಗಬೇಕು. ದೇಶವನ್ನು ಆವರಿಸಿರುವ ಕಂದಾಚಾರಗಳನ್ನು, ಮೂಢನಂಬಿಕೆಗಳನ್ನು, ಮತ್ತು ಅನಿಷ್ಟ ಪದ್ಧತಿಗಳನ್ನು ತೊರೆದು ಹೊಸ ಮೌಲ್ಯಗಳನ್ನು ಪುನರ್‌ಸೃಷ್ಠಿಸಿ ಸಮ ಸಮಾಜಕ್ಕಾಗಿ ದುಡಿಯಬೇಕಾಗಿದೆ. ಆದರೆ ಮಾನವನು ತನ್ನ ಸ್ವಾರ್ಥಕ್ಕಾಗಿ ಸತ್ಯ ಮತ್ತು

ನೀತಿಗಳನ್ನು ಮರೆತು ಬದುಕುತ್ತಿದ್ದಾನೆ. ಇದರಿಂದಾಗಿ ಮಾನವನಾಭಿವೃದ್ಧಿ ಮತ್ತು ದೇಶದಾಭಿವೃದ್ಧಿ ಕುಂಠಿತಗೊಂಡು ಹಿಂದುಳಿಯಲು ಕಾರಣವಾಗಿದೆ. ಅದ್ಧರಿಂದ ಮಾನವನು ಸದಾ ನೈತಿಕತೆ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೋಂಡು ನೀತಿ ಮಾರ್ಗದಲ್ಲಿ ನಡೆದು ದೇಶಾಭಿವೃದ್ಧಿಗೆ ದುಡಿಯುವುದು ಅನಿವಾರ್ಯವಾಗಿದೆಂದು ಸರ್ವಜ್ಞನು ಹೆಳಿದ್ದು ಸರ್ವಕಾಲಿಕ ಸತ್ಯವಾಗಿದೆ.

ಒಟ್ಟಾರೆಯಾಗಿ ಸರ್ವಜ್ಞನೆಂಬುವನು ಗರ್ವದಿಂದಾಗದೆ ಸರ್ವರಲ್ಲಿ ಒಬ್ಬರಾಗಿ ಸಮ ಸಮಾಜಕ್ಕಾಗಿ ದುಡಿದ ವಚನಕಾರನಾಗಿದ್ದಾನೆ. ಮಾನವನು ಪ್ರತಿನಿತ್ಯ ಅನುಸರಿಸಬೇಕಾದ ಮತ್ತು ಮುಂದುವರಿಸಿಕೊಂಡು ಹೋಗಬೇಕಾದ ಹಲವಾರು ಸರ್ವಕಾಲಿಕ ಮತ್ತು ಸತ್ಯವಾದ ಅಂಶಗಳನ್ನು ತನ್ನ ವಚನಗಳಲ್ಲಿ ಅಭಿವ್ಯಕ್ತಪಡಿಸಿದ್ದು ವಿಶ್ವವೂ ಸಮಗ್ರ ಅಭಿವೃದ್ಧಿಯ ಕಡೆಗೆ ಸಾಗಲು ಕಾರಣಿಭೂತವಾಗಿವೆಯೆಂದರೆ ತಪ್ಪುಗಲಾರದು.

**ಕೊನೆಟಿಪ್ಪಣಿಗಳು**

1. ರಾಗೌ. (ಸಂ.). *ಸರ್ವಜ್ಞನ ಸಮಗ್ರ ತ್ರಿಪದಿಗಳು.* ಪು.ಸಂ. 32
2. ಜಯರಾಮಯ್ಯ ವಿ. (ಸಂ.) *ಸರ್ವಜ್ಞನ ವಚನಗಳು: ತಾತ್ವಿಕ ಅನುಸಂಧಾನ.* ಪು.ಸಂ. 107

**ಪರಾಮರ್ಶನ ಗ್ರಂಥಗಳು**


- ಅಮರೇಶ ನುಗಡೋಣಿ. (ಸಂ.) (2013). *ಸರ್ವಜ್ಞನ ತ್ರಿಪದಿಗಳು ಅನುಸಂಧಾನದ ನೆಲೆಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಬಸವರಾಜು, ಎಲ್ (ಸಂ.) (2016). *ಸರ್ವಜ್ಞನ ವಚನಗಳು.* ಸಪ್ನ ಬುಕ್‌ಹೌಸ್.
- ಜಯರಾಮಯ್ಯ ವಿ. (ಸಂ.) (2017). *ಸರ್ವಜ್ಞನ ವಚನಗಳು: ತಾತ್ವಿಕ ಅನುಸಂಧಾನ.* ಉಷಾ ಪ್ರಕಾಶನ.
- ಮಹದೇವಯ್ಯ, ಪಿ (ಸಂ.) (2014). *ಸರ್ವಜ್ಞನ ತೌಲನಿಕ ಅಧ್ಯಯನಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಾಗೌ. (ಸಂ.). (2013). *ಸರ್ವಜ್ಞನ ಸಮಗ್ರ ತ್ರಿಪದಿಗಳು* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ವೀರೇಶ್ ಬಡಿಗೇರಿ. (ಸಂ.) (2014). *ಸರ್ವಜ್ಞ ಸಾಹಿತ್ಯ ಕುರಿತ ಅಧ್ಯಯನಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.